**ಕರ್ನಾಟಕ ಸರ್ಕಾರ**

**ನೋಂದಣಿ ಮತ್ತು ಮುದ್ರಾಂಕ ಇಲಾಖೆ**

ಸಂಖ್ಯೆ:Comp/09/2007-08

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಶಿಂಷಾ ಭವನ, ನಂ.720, 8ನೇ ಬ್ಲಾಕ್,
46ನೇ ಅಡ್ಡ ರಸ್ತೆ, ಸಂಗಮ್ ಸರ್ಕಲ್,
ಜಯನಗರ, ಬೆಂಗಳೂರು-82.
ದಿನಾಂಕ:09-09-2008.

## ಸುತ್ತೋಲೆ-17

**ವಿಷಯ:** ವಿದ್ಯುತ್ ಶಾರ್ಟ್ ಸರ್ಕೀಟ್/ಬೆಂಕಿ ಆಕಸ್ಮಿಕ ಇತ್ಯಾದಿ ದುರ್ಘಟನೆಗಳ ಸಂಬಂಧವಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಕುರಿತು.

<<<0>>>

ಇತ್ತೀಚೆಗೆ ಮೈಸೂರು ಅಧಿಕ ಜಿಲ್ಲಾ ನೋಂದಣಿ ಕಛೇರಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದಾಗಿ ಕಂಪ್ಯೂಟರ್, ಸ್ಕ್ಯಾನರ್ ಸೇರಿದಂತೆ ಹಲವಾರು ಕಂಪ್ಯೂಟರ್ ಸಂಬಂಧಿತ ಉಪಕರಣಗಳು ಬೆಂಕಿಗೆ ಆಹುತಿಯಾಗಿ ಸುಟ್ಟುಹೋಗಿರುತ್ತವೆ.

CPU ಮತ್ತು ಹಾರ್ಡ್ ಡಿಸ್ಕ್‌ಗಳಿಗೆ ಈ ಬೆಂಕಿ ಆಕಸ್ಮಿಕದಿಂದ ಹಾನಿಯಾಗಿಲ್ಲದೆ ನೋಂದಾಯಿತ ದಸ್ತಾವೇಜುಗಳ ಡಾಟಾ ಸುರಕ್ಷಿತವಾಗಿರುವುದಾದರೂ ಹೆಚ್ಚಿನ ಪ್ರಮಾಣದ ಬೆಂಕಿ ಅನಾಹುತವಾಗಿದ್ದಲ್ಲಿ ಅವುಗಳಿಗೂ ಬೆಂಕಿ ತಗುಲಿ ನಷ್ಟವಾಗುವ ಸಾಧ್ಯತೆ ಇದ್ದಿತು.

ಈ ಪ್ರಕಾರದ ವಿದ್ಯುತ್ ಶಾರ್ಟ್ ಸರ್ಕೀಟ್ ಅಥವಾ ಬೆಂಕಿ ಆಕಸ್ಮಿಕವಾಗುವುದಕ್ಕೆ ಅವಕಾಶವಿರದಿರಲು ರಾಜ್ಯದ ಎಲ್ಲಾ ಉಪ-ನೋಂದಣಿ/ಜಿಲ್ಲಾ ನೋಂದಣಿ ಅಧಿಕಾರಿಗಳಿಗೆ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

1) ವಿದ್ಯುತ್ ಸಂಪರ್ಕದ ಎಲ್ಲಾ ಪಾಯಿಂಟ್‌ಗಳನ್ನು ಹಾಗೂ ವೈರಿಂಗನ್ನು ವಿದ್ಯುತ್ ರಿಪೇರಿ ಮಾಡುವ ಪರಿಣಿತರಿಂದ ಪ್ರತಿ 6 ತಿಂಗಳಿಗೊಮ್ಮೆ ಪರೀಶಿಲಿಸಿ ಸರಿ ಇರುವ ಬಗ್ಗೆ ಅವರಿಂದ ಪ್ರಮಾಣ ಪತ್ರ ಪಡೆದು ಕಛೇರಿಯ ಸಂಬಂಧಪಟ್ಟ ಕಡತದಲ್ಲಿರಿಸುವುದು.
2) ವಿದ್ಯುತ್ ಸಂಪರ್ಕ ಪರಿಶೀಲನಾ ಸಂದರ್ಭದಲ್ಲಿ ಯಾವುದೇ ವೈರಿಂಗ್ ಅಥವಾ ಪಾಯಿಂಟ್‌ಗಳಲ್ಲಿ ದೋಷ ಕಂಡುಬಂದಲ್ಲಿ ಅದರ ನಿವಾರಣೆ/ದುರಸ್ಥಿ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.
3) ಪ್ರತಿ ದಿನ ಸಂಜೆ ಕಛೇರಿ ಮುಕ್ತಾಯವಾದ ನಂತರ ಕಛೇರಿ ಬಾಗಿಲುಹಾಕುವ ಪೂರ್ವದಲ್ಲಿ ಎಲ್ಲಾ ಕಂಪ್ಯೂಟರ್ ವಿದ್ಯುತ್ ಸ್ವಿಚ್ ಹಾಗೂ ಮುಖ್ಯ ಸ್ವಿಚ್‌ಗಳನ್ನು ಕಡ್ಡಾಯವಾಗಿ ಬಂದ್ ಮಾಡುವುದು (Switch off).
4) ಕಛೇರಿಯಲ್ಲಿ ಅನುಪಯುಕ್ತವಾದಂತಹ ವಸ್ತುಗಳಾವುವನ್ನು ಇಟ್ಟುಕೊಳ್ಳಕೂಡದು.
5) ಕಛೇರಿಯಲ್ಲಿ ಕಸ, ಕಡ್ಡಿ, ಪೇಪರ್ ತುಂಡುಗಳು ಬೀಳದಂತೆ ನೋಡಿಕೊಳ್ಳುವುದು.
6) ಬೆಂಕಿ ನಂದಿಸುವ ಉಪಕರಣವನ್ನು ಖರೀದಿಸಿ ಕಛೇರಿಯ ಒಳಗಡೆ ಮುಂಬಾಗಿಲ ಹತ್ತಿರದಲ್ಲಿ ಕೈಗೆಟಕುವಂತಹ ಸ್ಥಳದಲ್ಲಿ ಪ್ರತಿಷ್ಠಾಪಿಸುವುದು.
7) ಕಛೇರಿಯ ಒಳಗಡೆ ಅಥವಾ ಕಛೇರಿ ಆವರಣದಲ್ಲಿ ಕಟ್ಟಿಗೆ, ಡಿಸೇಲ್, ಪೆಟ್ರೋಲ್, ಸೀಮೆ ಎಣ್ಣೆ ಅಥವಾ ಇನ್ನಾವುದೇ ಹೊತ್ತಿಕೊಂಡು ಉರಿಯುವ ಪಾರ್ಥಗಳನ್ನು ಶೇಖರಿಸಿಡಕೂಡದು.
8) ಕಛೇರಿ ಒಳಗಡೆ ಕಂದೀಲು, ದೀಪ, ಮೇಣದಬತ್ತಿ ಇತ್ಯಾದಿಗಳನ್ನು ಹೊತ್ತಿಸಕೂಡದು.

9) ವಿದ್ಯುತ್ ಇಲ್ಲದೆ ಕಛೇರಿಯಲ್ಲಿ ಕತ್ತಲು ಆವರಿಸಿದಲ್ಲಿ ಬ್ಯಾಟರಿ ಚಾಲಿತ ದೀಪಗಳನ್ನು ಮಾತ್ರ ಉಪಯೋಗಿಸತಕ್ಕದ್ದು.

ಮೇಲ್ಕಂಡ ಸೂಚನೆ/ಮುಂಜಾಗ್ರತಾ ಕ್ರಮಗಳನ್ನು ರಾಜ್ಯದ ಎಲ್ಲಾ ಉಪ-ನೋಂದಣಿ/ಜಿಲ್ಲಾ ನೋಂದಣಿ ಆಧಿಕಾರಿಗಳು ಚಾಚು ತಪ್ಪದೇ ಪಾಲಿಸತಕ್ಕದ್ದು. ಮತ್ತು ಪಾಲನಾ ವರದಿ ಜರೂರು ಸಲ್ಲಿಸಲು ಸೂಚಿಸಲಾಗಿದೆ.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಇವರಿಗೆ:

ರಾಜ್ಯದ ಎಲ್ಲಾ ಉಪ-ನೋಂದಣಿ/ ಜಿಲ್ಲಾ ನೋಂದಣಿ ಅಧಿಕಾರಿಗಳಿಗೆ.